## ಮಾತು-ಕತೆ

ಸ್ವರೂಪದಲ್ಲಿ ಯಾಕೆ ಬರೆದಿರಿ? ಸಂಭಾಷಣೆ ಹೆಂಗಸಿಗೆ ಪ್ರಿಯವಾದ ಮಾಧ್ಯಮವೆಂದೆ? ಮತ್ತೆ ಆ ಇಡೀ ಕಾದಂಬರಿಯಲ್ಲಿ ಗಂಡಸರಿದ್ದಾರೆ... ಆದರೆ ಅವರಲ್ಲಿ ಒಬ್ಬರಿಗೆ ಒಂದೂ ಸಂಭಾಷಣೆಯು ಇಲ್ಲ... ಇದು ನೀವು ಪ್ರಜ್ಞಾಪೂರ್ವಕವಾಗಿಯೇ ಆಯ್ಕೆ ಮಾಡಿಕೊಂಡ ತಂತ್ರವೇ?

ನಾನು ಬಾಲ್ಯದಲ್ಲಿ ದಿನನಿತ್ಯ ಕಾಣುತ್ತಿದ್ದ ಲೋಕವನ್ನೇ 'ಸ್ತ್ರೀಲೋಕ'ದಲ್ಲಿ ಚಿತ್ರಿಸಿದ್ದೇನೆ. ಆಗ ನಾನು ನೋಡ್ತಿದ್ದ ಹಾಗೆ ಮಹಿಳೆಯರ ಸಂಖ್ಯೆ ಜಾಸ್ತಿ ಇತ್ತು. ನನ್ನ ಸುತ್ತಮುತ್ತ ನನಗೆ ಬರಿಯ ಮಹಿಳೆಯರೇ ಕಾಣುತ್ತಿದ್ದರು. ಮತ್ತು ಅವರು ಹೊರಗಡೆ ಹೋಗ್ತಾ ಇದ್ದಿದ್ದೆ ಬಹಳ ಕಡಿಮೆ. ಅವರೇನಿದ್ದರೂ ಮನೆಯ ನಾಲ್ಕು ಗೋಡೆಗಳ ಮಧ್ಯೆ ಇರುತ್ತಿದ್ದರು. ಗಂಡಸರು ಬೆಳಿಗ್ಗೆ ಕೆಲಸಕ್ಕೆ ಹೊರಹೋದ ಕೂಡಲೇ ಹೆಂಗಸರದ್ದೇ ಒಂದು ಲೋಕ ಸೃಷ್ಟಿಯಾಗಿ ಬಿಡ್ತಿತ್ತು. ನಾಲ್ಕು ಗೋಡೆಯ ನಡುವೆ ಇದ್ದರೂ ಏನಾದರೂ ಕೆಲಸ ಮಾಡ್ತಾನೆ ಇರ್ತಿದ್ದರು. ಒಲೆಯ ಮುಂದೆ, ದನ ಕರೆಯುತ್ತಾ, ಜಡೆ ಹೆಣೆಯುತ್ತಾ, ಕಸ ಗುಡಿಸುತ್ತಾ, ಮಜ್ಜಿಗೆ ಕಡೆಯುತ್ತಾ ಹೀಗೆ ಕಾಯಕ ಪ್ರಪಂಚವೇ ಅಲ್ಲಿ ಸೃಷ್ಟಿಯಾಗ್ತಿತ್ತು. ಕಾಯಕ ಮಾಡುತ್ತಲೇ ಅವರು ಪರಸ್ಪರ ಮಾತುಕತೆ ನಡೆಸುತ್ತಿದ್ದರು. ಆ ಮಾತುಕತೆಯಲ್ಲಿ ಅವರೆಲ್ಲ ಕಷ್ಟಸುಖಗಳನ್ನು ಪರಸ್ಪರ ಹಂಚಿಕೊಳ್ಳುತ್ತಿದ್ದರು. ನನ್ನ ಕವಿತೆಗಳಿಗಿಂತ ಭಿನ್ನವಾಗಿ ಈ ಕಾದಂಬರಿಯಲ್ಲಿ ಗಿಡ ಮರ, ನದಿ ಬೆಟ್ಟ ಹೂವು ಏನೂ ಬರಲ್ಲ. ಕಾದಂಬರಿ ನಡೆಯೋದೆ ನಾಲ್ಕು ಗೋಡೆಗಳ ಮಧ್ಯೆ. ಈ ಪ್ರಪಂಚವನ್ನು ನಾನೊಬ್ಬ ವೀಕ್ಷಕಿಯಾಗಿ ಮೂಲೆಯಲ್ಲಿ ನನ್ನ ಪಾಡಿಗೆ ನಾನು ಓದಿಕೊಳ್ಳುತ್ತಲೇ ವೀಕ್ಷಿಸುತ್ತಿದ್ದೆ. ಅವರ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದೆ.

ನನ್ನ ಇಪ್ಪತ್ತೈದು ವರುಷದ ವರೆಗೆ ಬಹಳ ಹತ್ತಿರದಿಂದ ನೋಡಿರುವ ಪ್ರಪಂಚವಿದು. ನಾನು ನೋಡಿರುವ ಹೆಣ್ಣುಮಕ್ಕಳು ಯಾರಿದಾರೋ ಅವರೆಲ್ಲರ ಕಥೆ ಅಲ್ಲಿ ಬರುತ್ತದೆ. ಒಂದು ಹಂತದಲ್ಲಿ ನನಗೆ ಅನಿಸಲು ಶುರುವಾಯಿತು. ಏನೆಂದರೆ ನಾನು ಕಂಡ ಈ ಲೋಕ ಕಳೆದು ಹೋಗುತ್ತಿದೆ. ಮರೆಯಾಗುತ್ತಿದೆ... ಯಾಕೆಂದರೆ ಮಿಕ್ಸಿ, ಗ್ಯಾಸ್, ಕುಕ್ಕರ್ ಇವೆಲ್ಲ ಅಡಿಗೆ ಮನೆ ಪ್ರವೇಶಿಸಿದ್ದವು. ಹೆಣ್ಣು ಮಕ್ಕಳು ಶಿಕ್ಷಣ ಪಡೆದು ಹೊರಪ್ರಪಂಚಕ್ಕೆ ತೆರೆದುಕೊಳ್ಳಲಾರಂಭಿಸಿದ್ದರು. ನಾನು ಕಂಡ ಪ್ರಪಂಚ ಬೇರೆ ಅನಿಸಲು ತೊಡಗಿ ಅದರ ದಾಖಲೆಯಾಗಬೇಕೆಂಬ ಉದ್ದೇಶದಿಂದ ಈ ಕಾದಂಬರಿ ಬರೆದೆ. ಆದರೆ ನಿಜ ಹೇಳುವೆ, ಧೈರ್ಯವಾಗಿ ನಾನು ಕಂಡದ್ದೆಲ್ಲವನ್ನು ಈ ಕಾದಂಬರಿಯಲ್ಲಿ ತರಲು ಆಗಿಲ್ಲ. ಅವರೆಲ್ಲ ಕಣ್ಣೆದುರಿಗೆ ಬದುಕಿರುವಾಗ ನನಗೆ ಅವರ ಬಗ್ಗೆ ಬರೆಯೋಕೆ ಹಕ್ಕಿಲ್ಲ ಅನಿಸ್ತಿತ್ತು. ಇಲ್ಲಿ ನಾನು ತುಂಬಾ ರಾಜಿ ಮಾಡಿಕೊಂಡಿದೀನಿ. ಸ್ತ್ರೀಲೋಕವನ್ನು ಇನ್ನೂ ಧೈರ್ಯವಾಗಿ ಬರೆಯಲು ನನ್ನಿಂದ ಸಾಧ್ಯವಾಗಿದ್ದರೆ ಅದೊಂದು ಅಪೂರ್ವ ಕೃತಿಯಾಗ್ತಿತ್ತು ಅಂತ ನನಗೀಗಲೂ ಅನಿಸುತ್ತದೆ.

- 'ಸ್ತ್ರೀಲೋಕ' ಕಾದಂಬರಿ ಬಹುಜನಪ್ರಿಯವಾದರೂ ನೀವು ಇನ್ನೊಂದು ಕಾದಂಬರಿ ಬರೆಯಲು ಮನಸ್ಸು ಮಾಡದೆ ಕವಿತೆಗೆ ವಾಪಸಾದಿರಿ ಏಕೆ?

'ಸ್ತ್ರೀಲೋಕ'ದ ಮುಂದುವರಿಕೆಯಾಗಿ ನಾನು 'ಸ್ತ್ರೀಮತ' ಎಂದು ಬರೆದಿದ್ದೇನೆ. ಸ್ತ್ರೀಲೋಕದಲ್ಲಿ ಮಾತುಕತೆ ಇದ್ದರೆ ಸ್ತ್ರೀಮತದಲ್ಲಿ ಟೆಲಿಫೋನ್ ಸಂಭಾಷಣೆ ಇದೆ. ನನ್ನ ಕಾಲದ ಮಹಿಳೆಯರ ಲೋಕದ ಚಿತ್ರಣವಿದು. 25 ಎಪಿಸೋಡ್ ಬರೆದಿದ್ದೇನೆ. ಗದ್ಯ ಬರೆಯೋದೆ ಇಲ್ಲ ಅಂತಲ್ಲ. ಲೇಖನಗಳನ್ನು ಬರೆಯುತ್ತಿರುತ್ತೇನೆ. ಅದನ್ನೇನು ನಿಲ್ಲಿಸಿಲ್ಲ. ಕಾದಂಬರಿ ಬರೆಯೋದು ಸುಲಭವಲ್ಲ ಅನಿಸತ್ತೆ. ಸ್ತ್ರೀಲೋಕ ಬರೆದಾಗ ಓತಪ್ರೋತವಾಗಿ ಐನೂರು ಪೇಜ್‌ನಷ್ಟು ಬರೆಯಲು ಸಾಧ್ಯವಾಯಿತು. ಅಷ್ಟು ಸ್ಟಾಕ್ ಇತ್ತು ನನ್ನಲ್ಲಿ. ಸ್ತ್ರೀಲೋಕದಲ್ಲಿ ನಾನು ನೋಡಿರೋ ಹೆಣ್ಣುಮಕ್ಕಳನೆಲ್ಲ ತಂದು ಬಿಟ್ಟಿದೀನಿ ಅನಿಸತ್ತೆ.